INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
Page No,71-79
Peer -Reviewed, Refereed Journal

# ನಾಗರೀಕ ಸಂಸ್ಕೃತಿ, ವಾನರ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿಗಳ ತೌಲನಿಕ ಅಧ್ಯಯನ

*.ರೇಖಾ ಎನ್.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ರಾಮಾಯಣ ಮಹಾಕಾವ್ಯವನ್ನು ವಸ್ತುವನ್ನಾಗಿಸಿಕೊಂಡಿರುವ ಸಾಕಷ್ಟು ಕೃತಿಗಳು ಕನ್ನಡದಲ್ಲಿವೆ. ಅದರಲ್ಲಿ ಸಾವಿತ್ರಮ್ಮನವರ ವಿಮುಕ್ತಿ ಕೂಡ ಒಂದು. ಇದು ಉತ್ತರಕಾಂಡದಿಂದ ಪ್ರೇರಿತವಾದ ಕಥೆ. ಜನತಾಪವಾದಕ್ಕೆ ಹೆದರಿ ರಾಮ ಸೀತೆಯನ್ನು ಕಾಡಿಗೆ ಕಳುಹಿಸಿದ ಕಥೆ ಉತ್ತರಕಾಂಡದಲ್ಲಿ ಬರುತ್ತದೆ ಅಷ್ಟೇ. ವಿಮುಕ್ತಿಯ ಕಥಾವಸ್ತುವೂ ಅದೇ. ಆದರೆ ಇಲ್ಲಿ ನಿರೂಪಣೆಯ ರೀತಿ ಮತ್ತು ಕಥೆಯ ಮುಖ್ಯ ಪಾತ್ರಗಳನ್ನು ಚಿತ್ರಿಸಿರುವ ಬಗೆ ಬೇರೆಯಾಗಿದೆ. ಈ ಕೃತಿಯ ಗಣನೀಯ ಭಾಗ ಮನೋವಿಶ್ಲೇಷಣೆಗೆ ಮೀಸಲಾಗಿದೆ. ಲಂಕೆಯ ವಿಜಯದ ನಂತರ ರಾಮ, ಲಕ್ಷ್ಮಣ, ಸೀತೆ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಹಿಂದಿರುಗುತ್ತಿದ್ದಾರೆ. ಇವರೊಡನೆ ಸುಗ್ರೀವ, ಹನುಮಂತ ಮುಂತಾದ ವಾನರ ವೀರರು ಮತ್ತು ವಿಭೀಷಣ ಮೊದಲಾದ ರಾಕ್ಷಸ ವೀರರು ರಾಮನ ಪಟ್ಟಾಭಿಷೇಕದಲ್ಲಿ ಪಾಲ್ಗೊಳ್ಳಲು ಇವರೊಡನೆ ಬರುತ್ತಿದ್ದಾರೆ. ಇವರೆಲ್ಲಾ ಈಗ ರಾಮನ ಹಿಂಬಾಲಕರು, ಆದರೂ ವಾನರ ವೀರನಾದ ವಾಲಿಯನ್ನು ಕೊಂದವನು ರಾಮ ಎಂಬುದನ್ನು ವಾನರ ಸಂಕುಲದವರು ಮರೆಯಲಾರರು. ಹಾಗೆ ರಾವಣನ ಶೌರ್ಯವನ್ನು ನೆನೆದ ರಾಕ್ಷಸ ವೀರರಲ್ಲಿ ವಿಭೀಷಣನ ಆಳ್ವಿಕೆ ಮುಂದೆ ಹೇಗೋ ಏನೋ ಅಯೋಧ್ಯೆಯ ಪ್ರತಿಕ್ರಿಯೆಯನ್ನು ನಿರೀಕ್ಷಿಸಬೇಕಾಗಬಹುದು, ಎಲ್ಲದಕ್ಕೂ ರಾಮನ ಅಪ್ಪಣೆ ಕಾಯಬೇಕೇನೋ ಎಂದು ಯೋಚಿಸುತ್ತಾರೆ. ಹಿನ್ನೋಟದಲ್ಲಿ ಅವರಿಗೆ ಈ ಘಟನೆಗಳೆಲ್ಲಾ ಹೇಗೆ ಕಂಡವು? ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಹಾಗೆ ನಾಗರೀಕ ಸಂಸ್ಕೃತಿ, ವಾನರ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿಗಳಲ್ಲಿರುವ ಸಾಮ್ಯತೆ, ಭಿನ್ನತೆಗಳನ್ನು ಪರಾಮರ್ಶಿಸಲಾಗುತ್ತದೆ.

ಸಂಸ್ಕೃತಿ ಎಂಬ ಪದಕ್ಕೆ ಮಾನವಿಕ ಶಾಸ್ತ್ರದ ಪ್ರಕಾರ ತೀರ ವಿಶಾಲವಾದ ಅರ್ಥವಿದೆ. ಸಾಮಾನ್ಯ ಅರ್ಥದಲ್ಲಿ ಸಂಸ್ಕೃತಿ ಎಂದರೆ ಹೃದಯ ಸಂಸ್ಕಾರ ಹಾಗೂ ನಯನಾಜೂಕುಗಳು ವೈಜ್ಞಾನಿಕ ದೃಷ್ಟಿಯಲ್ಲಿ

1.ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ ಮೈಸೂರು
2 .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಇಡೀ ಸಾಮಾಜಿಕ ಸಂಪ್ರದಾಯ ಪರಂಪರೆಯಲ್ಲಿ ಸಂಸ್ಕೃತಿ ಮಾನವ ಪ್ರಾಕೃತಿಕ ಸ್ಥಿತಿಯನ್ನು ದಾಟಿ ನಂತರ ಕಲಿತದ್ದೆಲ್ಲವನ್ನು ಸಂಸ್ಕೃತಿ ಯ ಗುಂಪಿಗೆ ಸೇರಿಸುತ್ತಾರೆ. ಸಮಾಜಶಾಸ್ತ್ರಜ್ಞರು ಸಂಸ್ಕೃತಿ ಮಾನವನಿಗೆ ಮಾತ್ರ ವಿಶಿಷ್ಟವಾದ ಅಂಶ ಪ್ರಾಣಿಗಳಿಂದ ಮನುಷ್ಯನನ್ನು ಪ್ರತ್ಯೇಕಗೊಳಿಸುವ ಅಂಶವೇ ಸಂಸ್ಕೃತಿ ಕಲಿತ ವರ್ತನೆಯನ್ನು ಬೆಳೆಸುವ ಮತ್ತು ರವಾನಿಸುವ ಕೆಲಸ ಮನುಷ್ಯನಿಗೆ ಮಾತ್ರ ಸಾಧ್ಯ ಬೌದ್ಧಿಕ ಅಥವಾ ಕಲಾತ್ಮಕವಾದ ಯಾವುದೇ ಕಲಿಕೆ ಅಥವಾ ಅಭಿವ್ಯಕ್ತಿಯು ಸಂಸ್ಕೃತಿಯ ವ್ಯಾಪ್ತಿಗೆ ಸೇರುತ್ತದೆ. ಪ್ರಕೃತಿ ಇದ್ದದ್ದು, ಸಂಸ್ಕೃತಿ ಕಲಿತದ್ದು, ವಿಕೃತಿ ಕೆಡಿಸಿದ್ದು.

"ಸಂಸ್ಕೃತಿ ಬಹುರೂಪಿ ಮುಖ್ಯವಾಗಿ ಸಂಸ್ಕೃತಿ ವ್ಯಕ್ತಿ ಜನಾಂಗ ಸಾಮಾಜಿಕ ಭಾಷಿಕನೆಲೆಯಲ್ಲಿ ರೂಪುಗೊಂಡಿದೆ. ಒಂದು ಜನಾಂಗದ ನಂಬಿಕೆ ಆಚರಣೆ ನಡೆ–ನುಡಿ ಮತ್ತೊಂದು ಜನಾಂಗದ ಆಚಾರ ವಿಚಾರ ನಡೆನುಡಿಗಳಿಗೂ ವ್ಯತ್ಯಾಸಗಳಿವೆ. ಹಾಗೆ ಒಂದೊಂದು ಜನಾಂಗದ ಸಂಸ್ಕೃತಿಗೂ ವ್ಯತ್ಯಾಸಗಳಿವೆ. ಬಹು ಜನಾಂಗದ ಬಹು ಜಾತಿಯ ದೇಶವಾಗಿರುವ ಇಲ್ಲಿ ಬಹು ಸಂಸ್ಕೃತಿಗಳಿವೆ. ಭಾರತದಲ್ಲಿ ಒಂದು ಜನಾಂಗವನ್ನು ಹಿಡಿಯಾಗಿ ಪ್ರತಿನಿಧಿಸುವ ಸಂಸ್ಕೃತಿ ರೂಪಿತವಾಗಲು ಸಾಧ್ಯವಿಲ್ಲ. ಸಂಸ್ಕೃತಿ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ."

"ಸಂಸ್ಕೃತಿ ಅಥವಾ ಜೀವನ ವಿಧಾನವು ವ್ಯಕ್ತಗೊಳ್ಳುವುದು ವ್ಯಕ್ತಿಗಳ ನಡವಳಿಕೆ ಮತ್ತು ಸಂಬಂಧಗಳಲ್ಲಿ. ಸಾಹಿತ್ಯದಲ್ಲಿ ಸಂಸ್ಕೃತಿಯ ಚಿತ್ರಣವೆಂದರೆ ಈ ನಡವಳಿಕೆ ಹಾಗೂ ಸಂಬಂಧಗಳ ಚಿತ್ರಣವೇ ಆಗುತ್ತದೆ. ಕನ್ನಡದಲ್ಲಿ ಮಹಿಳೆಯರು ತಮ್ಮ ಅಭಿವ್ಯಕ್ತಿಗೆ ಮುಖ್ಯವಾಗಿ ಆರಿಸಿಕೊಂಡ ಪ್ರಕಾರವೆಂದರೆ ಕಾದಂಬರಿ. ಬೇರೆ ಇನ್ಯಾವ ಪ್ರಕಾರಕ್ಕಿಂತಲೂ ಕಾದಂಬರಿ ಪ್ರಕಾರದಲ್ಲಿ ಮಹಿಳೆಯರು ಹೆಚ್ಚಿನ ಕೃಷಿ ನಡೆಸಿದ್ದಾರೆ".[೧]

ರಾಮಾಯಣ ಮಹಾಕಾವ್ಯವು ಅಂದಿನ ಕಾಲದ ವೈವಿಧ್ಯಮಯ ಸಂಸ್ಕೃತಿಗಳು ಮತ್ತು ಜೀವನ ಶೈಲಿಗಳ ಒಂದು ಶ್ರೀಮಂತ ಚಿತ್ರಣ ನೀಡುತ್ತದೆ. ಇದರಲ್ಲಿ ಮುಖ್ಯವಾಗಿ ನಾವು ಮೂರು ವಿಭಿನ್ನ ಸಂಸ್ಕೃತಿಗಳನ್ನು ನೋಡಬಹುದು. ನಾಗರೀಕ ಸಂಸ್ಕೃತಿ ವಾನರ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿ ಇವುಗಳ ಆಚಾರ – ವಿಚಾರ ಮೌಲ್ಯಗಳು ಸಾಮಾಜಿಕ ರಚನೆ ಮತ್ತು ನಡವಳಿಕೆಗಳಲ್ಲಿ ಗಮನಾರ್ಹ ವ್ಯತ್ಯಾಸಗಳನ್ನು ಹೊಂದಿವೆ. ನಾಗರೀಕ ಜೀವನ ಶೈಲಿ ಹೆಚ್ಚಾಗಿ ಕೋಸಲ ದೇಶದ ಅಯೋಧ್ಯೆ, ಮಿಥಿಲೆಯಂತಹ ರಾಜಧಾನಿಗಳಲ್ಲಿ ಕಂಡುಬರುವ ಸಂಸ್ಕೃತಿಯಾಗಿದೆ. ಇದು ಸಮಾಜದ ಉನ್ನತ ಆದರ್ಶಗಳು ಧಾರ್ಮಿಕತೆ ನ್ಯಾಯ ನೈತಿಕತೆ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ನಾಗರೀಕತೆಯನ್ನು ದೊಡ್ಡ ಹೆಚ್ಚು ಮುಂದುವರೆದ ಸಂಸ್ಕೃತಿ ಎನ್ನಲಾಗಿದೆ.

ವಾನರ ಸಂಸ್ಕೃತಿಯು ಅರಣ್ಯ ಪ್ರದೇಶದಲ್ಲಿನ ಕಿಷ್ಕಿಂಧೆಯಲ್ಲಿ ಕಂಡುಬರುತ್ತದೆ. ನೈಸರ್ಗಿಕ ಜೀವನ ಶೈಲಿಯನ್ನು ಅದು ಸೂಚಿಸುತ್ತದೆ. ಆಯುಧಗಳಾಗಿ ಕೂಡ ನೈಸರ್ಗಿಕ ವಸ್ತುಗಳಾದ ಮರಗಳು, ಬಂಡೆಗಳನ್ನು ವಾನರರು ಬಳಸುತ್ತಿದ್ದುದು ಕಂಡುಬರುತ್ತದೆ. ವಾನರರು ಶಕ್ತಿ ಮತ್ತು ಧೈರ್ಯಕ್ಕೆ ಹೆಸರಾಗಿದ್ದವರು. ಅವರ ದೈಹಿಕ ಬಲ ಅಧಿಕವಾಗಿದ್ದು ಸ್ವಾಮಿನಿಷ್ಟರಾಗಿ ಬದುಕುತ್ತಿದ್ದರು.

ರಾಕ್ಷಸ ಸಂಸ್ಕೃತಿಯ ಮೂಲ ನೆಲೆ ಲಂಕೆಯಾಗಿದೆ. ರಾವಣ ಯುದ್ಧೋತ್ಸಾಹಿ ಮತ್ತು ವೇದಗಳಲ್ಲಿ ಪಾಂಡಿತ್ಯ ಹೊಂದಿದವನಾಗಿದ್ದನು ಸಾಮವೇದವನ್ನು ರಚಿಸಿದ್ದನು ಮಹಾನ್ ಶಿವಭಕ್ತನಾಗಿದ್ದನು. ಆದರೆ ಅಹಂಕಾರ ಕ್ರೂರತೆ ಅಧರ್ಮದ ಸಂಕೀರ್ಣದ ಪ್ರತೀಕವಾಗಿದ್ದನು. ರಾವಣ, ಇಂದ್ರಜಿತ್ ರಾವಣನ ಮಂತ್ರಿಯಾದ ಪ್ರಹಸ್ಥ  ಮೊದಲಾದ ರಾಕ್ಷಸ ವೀರರು ಮಾಯಾ ವಿದ್ಯೆಗಳನ್ನು ಕಲಿತವರಾಗಿದ್ದರು. ಮಾಂತ್ರಿಕ ಶಕ್ತಿಯಿಂದ ಇತರರನ್ನು ಮೋಸಗೊಳಿಸುವುದು ರಾಕ್ಷಸ ಸಂಸ್ಕೃತಿಯ ಪ್ರಮುಖ ಅಂಶವಾಗಿತ್ತು. ರಾವಣ ಇಂದ್ರಜಿತ್ ಮುಂತಾದವರು ಇಂದ್ರನನ್ನೂ, ದೇವ ದಾನವರನ್ನು ಗೆದ್ದು ತಮ್ಮ ಅತಿಶಯ ಶೌರ್ಯ ಮೆರೆದಿದ್ದರು. ಆದರೆ ವಾಲಿ ರಾವಣನನ್ನು ಸೋಲಿಸಿದ್ದನು.

"ಮೂರು ಸ್ತರಗಳ ಮೂರು ವಿಭಿನ್ನ ಸಂಸ್ಕೃತಿಗಳ ಜನರ ಸಮಾವೇಶವಾಗಿದೆ. ಈ ಕೃತಿಯಲ್ಲಿ ಅಯೋಧ್ಯೆಯ ಮಾನವರು ಕಿಷ್ಕಿಂಧೆಯ ವಾನರರು ಮತ್ತು ಲಂಕೆಯ ದಾನವರು ಸ್ಥೂಲವಾಗಿ ಮೊದಲಿನ ಮೂರು ಸಂಪುಟಗಳು ಈ ಮಾನವಲೋಕ ವಾನರ ಲೋಕ ಮತ್ತು ದಾನವ ಲೋಕಗಳನ್ನು ಪ್ರತಿನಿಧಿಸುತ್ತವೆ".[೨]

ನಾಗರೀಕ ಸಂಸ್ಕೃತಿಯ ಪ್ರಕಾರ ಯುದ್ಧವೆಂದರೆ ಸಾಮಾನ್ಯವಾಗಿ ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸಲು ಬಳಸುವ ಒಂದು ಹಿಂಸಾತ್ಮಕ ಹೋರಾಟ ಎನ್ನಬಹುದು. ಸಾಮ್ರಾಜ್ಯ ವಿಸ್ತರಣೆಗಾಗಿ ಸಂಪನ್ಮೂಲ ನಿಯಂತ್ರಣಕ್ಕಾಗಿ ಮತ್ತು ಶಾಂತಿಯನ್ನು ಸ್ಥಾಪಿಸಲು ಅಥವಾ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅಗತ್ಯವಾಗಿ ಯುದ್ಧಗಳು ನಡೆಯುತ್ತಿದ್ದವು. ಇಲ್ಲಿನ ಯುದ್ಧ ಪಡೆಗೆ ಸತತ ಅಭ್ಯಾಸ ಮಾಡಿಸಿ ಶಸ್ತ್ರಾಸ್ತ್ರಗಳ ಪ್ರಯೋಗ ಕಲಿಸುತ್ತಿದ್ದರು. ಅದರಲ್ಲೂ ರಾಜಕುಮಾರರಿಗೆ ವಿಶೇಷ ತರಬೇತಿ ಸಿಗುತ್ತಿತ್ತು, "ವಾನರರ ಪ್ರಕಾರ ಜಗಳವೆಂದರೆ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗಿ ಕೈ ಕೈ ಕೂಡಿಸಿ ಹೊಡೆದಾಡುವುದೊಂದೇ ಅವರಿಗೆ ತಿಳಿದ ಯುದ್ಧ. ಮರವನ್ನೊ ಬಂಡೆಯನ್ನೊ ಕಿತ್ತು ಶತ್ರುವಿನ ಮೇಲೆ ಎಸೆಯುವುದನ್ನು ಮಾತ್ರ ಕಂಡಿದ್ದರು. ಅದೂ ಶತ್ರುವಿಗೆ ಹಿಂದಿನಿಂದ ಹೊಡೆಯಬಹುದೆನ್ನುವ ಕಲ್ಪನೆ ಕೂಡ ಅವರಿಗೆ ಬರುತ್ತಿರಲಿಲ್ಲ"[೩]. ರಾಕ್ಷಸನಾದ ರಾವಣನ ಸಾಮ್ರಾಜ್ಯದ ಯುದ್ಧ ವಿಚಾರಕ್ಕೆ ಬಂದರೆ ತುಂಬಾ ಆಧುನಿಕವಾಗಿದ್ದು, ನಾಗರೀಕ ಸೈನ್ಯದಷ್ಟೇ ಸಮರ್ಥರಾಗಿದ್ದರು. ಅದಲ್ಲದೆ ಅವರು ಬಹುರೂಪಿಣಿ ವಿದ್ಯೆ ನಿಕುಂಬಲೆಯಂತ ಯಜ್ಞ ಯಾಗಾದಿಗಳಿಂದ ವಿಶೇಷ ಶಕ್ತಿ ಗಳಿಸುತ್ತಿದ್ದರು.

ಇಲ್ಲಿ ನಾಗರೀಕ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿಯ ಯುದ್ಧಗಳಲ್ಲಿ ಸಾಮ್ಯತೆ ಕಂಡುಬಂದರೂ ವಾನರರ ಯುದ್ಧ ಕಲೆ ಬೇರೆಯಾಗಿ ನಿಲ್ಲುತ್ತದೆ. ರಾಮ ವಾಲಿಯನ್ನು ಕೊಂದಾಗ ಅವರಿಗೆ ಭಯ ಮತ್ತು ಆಶ್ಚರ್ಯಗಳು ಉಂಟಾದವು. ಅವರಿಗೆ ಬಿಲ್ಲು ಬಾಣಗಳ ಪರಿಚಯ ಇರಲಿಲ್ಲ. ದೂರದಲ್ಲಿ ಸುರಕ್ಷಿತವಾಗಿ ನಿಂತು ಒಬ್ಬ ಶತ್ರು ವನ್ನು ಕೊಲ್ಲಬಹುದೆಂಬ ಪವಾಡ ಅವರನ್ನು ದಿಗ್ಭ್ರಮೆಗೊಳಿಸಿತು. ಮರದ ಹಿಂದೆ ನಿಂತು ರಾಮ ಬಾಣ ಬಿಟ್ಟು ವಾಲಿಯನ್ನು ಕೊಂದಾಗ ವಾನರರಲ್ಲಿ ದೊಡ್ಡ ಆಂದೋಲನವೇ ನಡೆಯಿತು. ಇದೂ ಒಂದು ಯುದ್ಧವೇ? ಪರಾಕ್ರಮ ಪ್ರದರ್ಶನವೇ? ಅನೇಕರಿಗೆ ಅಸಮಾಧಾನವಾಯಿತು. ವಾಲಿ ಮೋಸಕ್ಕೆ ಒಳಗಾದನೆಂಬ ಭಾವನೆ ಸುಗ್ರೀವನ ಹಿಂಬಾಲಕರಲ್ಲೂ ಉಂಟಾಗಿತ್ತು. ರಾಮ ಲಕ್ಷ್ಮಣರ ಮಾನವ ಸಂಸ್ಕೃತಿ ಅವರಿಗೆ ಹೊಸದು. ಇದರಿಂದ ಭಯಭೀತರಾಗಿ ಶಕ್ತಿವಂತರ ಸತ್ಯವೇ ಉಚಿತವೆಂದು ರಾಮ ಲಕ್ಷ್ಮಣರನ್ನು ಒಪ್ಪಿದರು.

"ರಾಮ ಲಕ್ಷ್ಮಣರದು ತೀರಾ ಹೊಸ ಪದ್ಧತಿ ತಮ್ಮಂತೆ ಕೈ ಕೈ ಕಾಳಗ ಮಾಡಿದ್ದರೆ ರಾಮ ಲಕ್ಷ್ಮಣರಿಗೆ ಉಳಿಗಾಲವಿರುತ್ತಿರಲಿಲ್ಲ. ಶತ್ರು ಯಾರೆಂದು ತಿಳಿಯದೆಯೇ ಮೃತ್ಯುವನ್ನು ಅಪ್ಪಬಹುದು".[೪] ಮೂರು ಸಂಸ್ಕೃತಿಗಳ ಯುದ್ಧದ ವಿವರಣೆ ನೋಡಿದಾಗ ವಾನರ ವೀರರ ಶೌರ್ಯವೇ ಹೆಚ್ಚೆಂದು ಪರಿಭಾವಿಸಬಹುದು. ಮೋಸ ಕಪಟಗಳನ್ನರಿಯದೆ ನೇರಾನೇರ ಯುದ್ಧ ಮಾಡಿ ಜಯಗಳಿಸುತ್ತಿದ್ದರು ಅಥವಾ ಸೋಲುತ್ತಿದ್ದರೆ ಹೊರತು ಮೋಸದಿಂದ ಗೆಲ್ಲುತ್ತಿರಲಿಲ್ಲವೆಂಬ ಅಂಶ ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ.

ವಾಲಿ ರಾಮನನ್ನು ಕುರಿತು, "ರಾಮ ನಿನ್ನ ವಿಚಾರ ಕೇಳಿದೆ ಆದರೆ ನೀನು ವೀರಾಗ್ರಣಿ ಪರಾಕ್ರಮಿ ಎಂದು ಕೇಳಿದ್ದೇನೆ ಹೊರತು, ಮೋಸದಿಂದ ಗಿಡದ ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡುವೆ ಎಂದು ತಿಳಿದಿರಲಿಲ್ಲ".[೫] ಮೇಲಿನ ಮಾತುಗಳಿಂದ ರಾಮನ ಕೀರ್ತಿಶೌರ್ಯಗಳು ಈಗಾಗಲೇ ಎಲ್ಲಾ ಕಡೆ ಹರಡಿತ್ತೆಂಬುದು ತಿಳಿಯುತ್ತದೆ. ಪರಾಕ್ರಮಿಯಾದವನ ಸ್ನೇಹ ಗಳಿಸುವುದು ಶೌರ್ಯದ ಒಂದು ಚಿನ್ಹೆ. ಆದರೆ ಮೋಸದಿಂದ ವಾಲಿಯನ್ನು ರಾಮ ಕೊಂದದ್ದು ಅವನ ನೋವಿಗೆ ಕಾರಣವಾಗುತ್ತದೆ. ಹಾಗೆ ಆತ ಸುಗ್ರೀವನಿಂದ ನಿನಗೆ ಏನಾಗಬೇಕು ಎಂದು ಕೇಳುತ್ತಾನೆ. ಆಗ ರಾಮ ರಾವಣ ಸೀತೆಯನ್ನು ಅಪಹರಿಸಿದ್ದಾನೆ ಎಂದಾಗ ವಾಲಿ "ದುರಹಂಕಾರಿ ರಾವಣನೊ ಎದುರಿಗೆ ನಿಂತು ಸಾಮರ್ಥ್ಯದಿಂದ ಹೊಡೆದಾಡಿ ಸೀತೆಯನ್ನು ಒಯ್ಯದೆ ಕಳ್ಳತನದಿಂದ ಎತ್ತುಕೊಂಡು ಹೋದನೆಂದು ಕೇಳಿದೆ. ಆ ಹೇಡಿಯೊಡನೆ ಯುದ್ಧ ಮಾಡಲು ನಿನಗೆ ಈ ಹೇಡಿಯ ಸಹಾಯವೇ ಬೇಕಾಯಿತೆ? ನನಗೊಂದು ಮಾತು ಹೇಳಿದ್ದರೆ ಅವನ ಜುಟ್ಟು ಹಿಡಿದೆಳೆದು ತಂದು ನಿನ್ನ ಎದುರಿಗೆ ಬೀಸಾಡುತ್ತಿದ್ದೆ".[೬]

ವಾಲಿಯ ಮೇಲಿನ ಮಾತುಗಳನ್ನು ಕೇಳಿದಾಗ ರಾಕ್ಷಸರು ಮೋಸದಿಂದ ಸೀತೆಯನ್ನು ಹೊತ್ತೊಯ್ದದ್ದು ಮತ್ತು ರಾಮ ಗಿಡದ ಮರೆಯಲ್ಲಿ ನಿಂತು ವಾಲಿಯನ್ನು ಕೊಂದ ಘಟನೆಗಳಿಗೆ ಹೋಲಿಕೆ ಇದೆ ಎನಿಸುತ್ತದೆ. ನಾಗರೀಕರು ಹಾಗೂ ರಾಕ್ಷಸರು ಯುದ್ಧ ಕಲೆಗಳಲ್ಲಿ ಆಧುನಿಕರಾಗಿದ್ದು, ವಾನರಗಿಂತ ಜೀವನ ಶೈಲಿಯಲ್ಲಿ ಶ್ರೇಷ್ಠವಾಗಿದ್ದರೂ, ಯುದ್ಧದ ವಿಚಾರಕ್ಕೆ ಬಂದಾಗ ವಾನರ ಸಂಸ್ಕೃತಿಯೇ ಶ್ರೇಷ್ಠವೆನಿಸುತ್ತದೆ. ವಾನರ ಸೇನೆಗೆ ಯುದ್ಧದ ಭೀಕರತೆಯ ಅರಿವಿರಲಿಲ್ಲ. ಅದರಲ್ಲೂ ಸುಗ್ರೀವನ ಸೇನೆ ಇದುವರೆಗೂ ಯಾವುದೇ ಮಹಾಯುದ್ಧಗಳಲ್ಲಿ ಭಾಗವಹಿಸಿರಲಿಲ್ಲ. ಆದರೆ ರಾಮ, ಲಕ್ಷ್ಮಣ ರಾಕ್ಷಸರಾದ ರಾವಣ, ಕುಂಭಕರ್ಣ, ಇಂದ್ರಜಿತ್ ಮೊದಲಾದವರಿಗೆ ಯುದ್ಧದ ಅರಿವಿತ್ತು. ವಾನರರು ಲಂಕೆಗೆ ಸೇತುವೆ ನಿರ್ಮಿಸುವಾಗ ವಿನೋದದಿಂದ ನಗುತ್ತಾ ಕಟ್ಟಿದರು. ಹಾಗೆ ಲಂಕೆಗೆ ಬಂದಾಗಲೂ ಸ್ವಲ್ಪ ಹೊತ್ತು ಮೌನವಾಗಿದ್ದು, ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮರುಳಾಗಿ ಕುಣಿದಾಡಹತ್ತಿದರು. ಯುದ್ಧದಲ್ಲಿ ಭಾಗವಹಿಸಿದ ಮೇಲೆ ಅದರ ಭೀಕರತೆಗೆ ಮತ್ತು ರಾಮ ರಾವಣಾದಿಗಳ ಬಿಲ್ಲಿನ ಠೇಂಕಾರಕ್ಕೆ ನಡುಗುತ್ತಿದ್ದರು. ಎಂಬುದನ್ನು ಅರಿತಾಗ ವಾನರರೆಷ್ಟು ಮುಗ್ಧರಾಗಿದ್ದರು ಎಂಬುದು ಗಮನಕ್ಕೆ ಬರುತ್ತದೆ.

ರಾವಣನ ಸಂಹಾರವಾದ ಮೇಲೆ ಸೀತೆಯನ್ನು ವಿಭೀಷಣ ಮತ್ತು ಸರಮೆ ರಾಮನ ಬಳಿಗೆ ಕರೆ ತಂದಾಗ, ರಾಮ ಸೀತೆಯನ್ನು ಕುರಿತು ಕಟುನುಡಿಗಳಾಡುವುದನ್ನು ಕೇಳಿ ವಾನರರಿಗೆ ಆಶ್ಚರ್ಯವಾಯಿತು. "ತಾವಾಗಿದ್ದರೆ ಅಷ್ಟು ದೊಡ್ಡ ಯುದ್ಧ ಮಾಡಿ ಆಕೆಯನ್ನು ಬರಮಾಡಿಕೊಂಡಿದ್ದರೆ ಎಷ್ಟು ಹಿಗ್ಗಿನಿಂದ ಕುಣಿದಾಡುತ್ತಿದ್ದರು. ಎಲ್ಲರೂ ಆಕೆನ್ನಪ್ಪಿ ಭುಜದ ಮೇಲೆ ಹೊತ್ತು ಮೆರೆದಾಡುತ್ತಿದ್ದರು. ಆದರೆ ಅದು ಮಾನವ ಸಂಸ್ಕೃತಿಯಲ್ಲ. ಕಟುವಚನಗಳಿಂದ ಆಕೆಯನ್ನು ನೋಯಿಸಿ, ಬೆಂಕಿಯಲ್ಲಿ ಬೀಳುವಂತೆ ರಾಮ ಮಾಡಿದನು. ಸುಗ್ರೀವ ಸೋತಾಗ ತಾರೆ ವಾಲಿಯನ್ನಾಶ್ರಯಿಸಲಿಲ್ಲವೇ? ಪುನಃ ಸುಗ್ರೀವನಲ್ಲಿಗೆ ಬರಲಿಲ್ಲವೇ? ಈ ಸಣ್ಣ ವಿಚಾರಕ್ಕೆ ಆಕೆ ಪ್ರಾಣ ಕಳೆದುಕೊಳ್ಳಬೇಕೇ?"[2] ಸೀತೆಯನ್ನು ರಾವಣ ಕದ್ದು ಒಯ್ದು ಕಾರಣ ವಾನರರಿಗೆ ಅವಳಲ್ಲಿ ಏನೂ ದೋಷ ಕಾಣಿಸಲಿಲ್ಲ. ಇದರಲ್ಲಿ ಸೀತೆಯ ತಪ್ಪೇನಿದೆ ರಾಮ ಹೀಗೇಕೆ ವರ್ತಿಸಿದ ಅವರಿಗೆ ಆಶ್ಚರ್ಯವಾಗಿ ಕಾಣಿಸತೊಡಗಿತು. ವಾಲಿ ಸತ್ತು ನಾನು ಆಕೆಯನ್ನು ಪರಿಗ್ರಸದಿದ್ದರೆ ಆಕೆಯ ಗತಿ ಏನು? ನನಗಿಂತ ಹಿರಿಯಳಲ್ಲ, ಆಕೆಗೆ ಬೇಕಾದದ್ದು ಗೌರವ ಪೂಜೆ, ಮರ್ಯಾದೆಗಳಲ್ಲ ಆಕೆಗೆ ಬೇಕಾದದ್ದು ಪ್ರೇಮ, ದೈಹಿಕ ಸುಖ ಎಂದು ತನ್ನ ಅತ್ತಿಗೆಯ ಬಗ್ಗೆ ಹೇಳುತ್ತಾನೆ. ವಾನರ ಸಂಸ್ಕೃತಿಯಲ್ಲಿ ಹೆಣ್ಣಿಗೆ ಇದ್ದ ಸಾಮಾಜಿಕ ಸ್ಥಾನಮಾನ ಇದರಿಂದ ಸ್ಪಷ್ಟವಾಗುತ್ತದೆ.

ರಾವಣನ ಅವಸಾನದ ನಂತರ, ರಾಕ್ಷಸರು ರಾಮ ಯುದ್ಧ ಮಾಡಿ ನಮ್ಮ ದೇಶವನ್ನು ಆಕ್ರಮಿಸಿಕೊಳ್ಳಲಿಲ್ಲ. ತನಗೆ ಸಹಾಯ ಮಾಡಿದ ವಿಭೀಷಣನಿಗೆ ಪಟ್ಟಕಟ್ಟಿದ. ನಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆಯಲಿಲ್ಲ. ಬಂದ ಹಾಗೆ ಬರಿಗೈಯಲ್ಲಿ ಹಿಂದಿರುಗುತ್ತಿದ್ದಾನೆ. ಆದರೆ ರಾವಣ ಯುದ್ಧದಲ್ಲಿ

ಗೆದ್ದಾಗ ತಾವು ತರುತ್ತಿದ್ದ ಚಿನ್ನ ಬೆಳ್ಳಿಗಳೇನು? ಆನೆ ಕುದುರೆಗಳು ಸಕಲ ಸೈನ್ಯವೂ ತಣಿದು ಭಂಡಾರವೂ ತುಂಬುತ್ತಿತ್ತು. ರಾಮನ ಯುದ್ಧ ಅವರಿಗೆ ಆಶ್ಚರ್ಯವನ್ನುಂಟುಮಾಡಿತು. ಒಂದು ಹೆಣ್ಣಿಗಾಗಿ ಇಷ್ಟು ದೊಡ್ಡ ಯುದ್ಧ ಮಾಡಬೇಕೆಂದು ಅವರಿಗೆ ಅನ್ನಿಸಲಿಲ್ಲ. ರಾಕ್ಷಸರ ಆಲೋಚನೆ ಎಲ್ಲವೂ ಧನಗ್ರಾಹ್ಯ ಮೂಲದ್ದಾಗಿದೆ. ಅವರು ಯುದ್ಧ ಮಾಡುವುದೆಂದರೆ ಕೇವಲ ಸಂಪತ್ತಿನ ಕ್ರೂಢೀಕರಣಕ್ಕಾಗಿ ಎಂಬ ಮನೋಭಾವನೆ ಇಲ್ಲಿ ಎದ್ದು ಕಾಣುತ್ತದೆ. ರಾಕ್ಷಸರಿಗೆ ರಾಮ ಇಲ್ಲಿ ಪರಿಹಾಸ್ಯವಾಗಿ ಕಾಣುತ್ತಾನೆ. ಇಲ್ಲಿ ಧನಕನಕಾದಿಗಳಿಗಾಗಿ ಯುದ್ಧ ಮಾಡುತ್ತಿಲ್ಲ. ಒಂದು ಹೆಣ್ಣಿಗಾಗಿ ಇಷ್ಟೆಲ್ಲ ಸಾವು ನೋವುಗಳು ಬೇಕಿತ್ತೇ? ಎಂಬ ಸಂಕುಚಿತ ಚಿಂತನೆ ರಾಕ್ಷಸರದು ಎಂಬುದನ್ನು ಲೇಖಕಿ ಇಲ್ಲಿ ಸಮರ್ಥವಾಗಿ ಅಭಿವ್ಯಕ್ತಪಡಿಸಿದ್ದಾರೆ. ಇಲ್ಲಿ ವಾನರ ಮತ್ತು ರಾಕ್ಷಸ ಸಂಸ್ಕೃತಿಗಳ ಅಭಿಪ್ರಾಯದಲ್ಲಿ ಸ್ವಲ್ಪ ಸಾಮ್ಯತೆ ಕಂಡು ಬರುತ್ತದೆ. ಏಕೆಂದರೆ ಎರಡು ಸಂಸ್ಕೃತಿಯಲ್ಲಿ ಹೆಣ್ಣಿಗೆ ತನಗೆ ಬೇಕಾದವರೊಡನೆ ಬದುಕುವ ಸ್ವಾತಂತ್ರ್ಯವಿದೆ. ಹಾಗೆ ತನ್ನದಲ್ಲದ ತಪ್ಪಿಗೆ ಬಲಿಯಾದ ಹೆಣ್ಣಿನ ಬಗ್ಗೆ ಕರುಣೆ, ಸಹಾನುಭೂತಿ ಇದೆ ಆದರೆ ಶ್ರೇಷ್ಠ ಸಂಸ್ಕೃತಿ ಎನಿಸಿಕೊಳ್ಳುವ ಮಾನವ ಸಂಸ್ಕೃತಿಯೇ ಈ ವಿಚಾರದಲ್ಲಿ ತನ್ನ ಅಲ್ಪತನವನ್ನು ಮೆರೆದಂತಾಗುತ್ತದೆ.

ಸ್ವತಃ ಲಕ್ಷ್ಮಣನಿಗೆ ರಾಮ ಸೀತೆಯ ಅಗ್ನಿಪ್ರವೇಶವನ್ನು ನಿಶ್ಚಲವಾಗಿ ನಿಂತು ನೋಡಿದಾಗ ಹೇಸಿಗೆಯಾಗುತ್ತದೆ. ಆರಾಧಿಸುತ್ತಿದ್ದ ಅಣ್ಣನ ಮೂರ್ತಿ ಕಿರಿದಾದ ಹಾಗೆ ಎನಿಸುತ್ತದೆ. ಮೂರು ಸಂಸ್ಕೃತಿಯಲ್ಲಿ ಬಹುಪತ್ನಿತ್ವ ಅಸ್ತಿತ್ವದಲ್ಲಿ ಇದ್ದಂತೆ ತೋರುತ್ತದೆ. ಆದರೆ ವಾನರ ಮತ್ತು ರಾಕ್ಷಸ ಸಂಸ್ಕೃತಿಯಲ್ಲಿ ಬಹುಪತಿತ್ವವು ಇರುವುದು ತಿಳಿಯುತ್ತದೆ.

"ಇಂತಹ ಕಷ್ಟಕ್ಕೆ ಹೆಣ್ಣು ಸಿಕ್ಕಿದರೆ ಧೈರ್ಯದಿಂದ ನನ್ನ ಆಸರೆ ನಿನಗಿದೆ ನಿನಗಾಗಿ ಲೋಕ ನಿಂದೆಯನ್ನು ಎದುರಿಸುತ್ತೇನೆ, ಎನ್ನುವ ಗಂಡು ಇನ್ನೂ ಹುಟ್ಟಿಲ್ಲ. ನಿಮ್ಮ ಅಣ್ಣನ ಮನಸ್ಸಿನಲ್ಲಿ ಬೇರೂರಿದ್ದ ಸಂಶಯ ಪಿಶಾಚಿಯೇ ಆತನ ವರ್ತನೆಯನ್ನು ನಿರ್ಧರಿಸಿತು. ಲೋಕಾಪವಾದದ ಭೀತಿಯಲ್ಲ"[೮]. ಎನ್ನುವ ಊರ್ಮಿಳೆಯ ಮಾತು ನಾಗರೀಕ ಸಂಸ್ಕೃತಿಯಲ್ಲಿ ಹೆಣ್ಣಿನ ಪಾತ್ರ ಏನು ಎಂಬುದನ್ನು ತೋರಿಸುತ್ತದೆ. ಸುಗ್ರೀವ, ವಾಲಿ ಗೆದ್ದಿದ್ದರಿಂದ ಅವನನ್ನು ವರಿಸಿದಳಷ್ಟೇ ಇದರಲ್ಲಿ ತಾರೆಯದೇನು ತಪ್ಪಿದೆ? ಎಂದು ಪ್ರಶ್ನಿಸುತ್ತಾನೆ. ಹಾಗೆ ರಾವಣ ಸೀತೆ ಬೇರೊಬ್ಬನ ಹೆಂಡತಿ ಎಂದು ತಿಳಿದೂ, ಅವಳ ಪ್ರೀತಿಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಲು ಸಿದ್ಧನಿದ್ದ ಎಂಬ ಅಂಶ ಗಮನಿಸಿದಾಗ, ವಾನರ ಮತ್ತು ರಾಕ್ಷಸ ಸಂಸ್ಕೃತಿಗಳು ಮನುಷ್ಯತ್ವವುಳ್ಳ ನಾಗರೀಕ ಸಂಸ್ಕೃತಿಗಿಂತ ಶ್ರೇಷ್ಠವೇನೋ ಎಂಬಂತೆ ಭಾಸವಾಗುತ್ತದೆ.

ಸ್ವತಃ ರಾಮ ರಾವಣನ ಪ್ರೀತಿಯನ್ನು ಕುರಿತು, ರಾವಣ ಜಗತ್ತನ್ನೇ ಮರೆತು ಸೀತೆಯ ಮೋಹಸಾಗರದಲ್ಲಿ ಕರಗಿ ಹೋಗಿದ್ದನು. ಅಂತಹ ಪ್ರೀತಿ ತೋರಲು ನನ್ನಿಂದ ಸಾಧ್ಯವೇ? ಅವಳ ಪ್ರೀತಿಗಾಗಿ ಅದರ ಒಂದು ಮಾತಿಗಾಗಿ ರಾವಣ ತನ್ನ ಸಕಲೈಶ್ವರ್ಯ ಸಂಪತ್ತುಗಳನ್ನು ತ್ಯಜಿಸಿ

ವನವಾಸದಲ್ಲಿರಲು ಸಿದ್ದನಾಗಿದ್ದನು. ಅವಳ ಸಹವಾಸಕ್ಕಾಗಿ ತಾಯಿ ತಮ್ಮಂದಿರು ಲೋಕ ಗೌರವ ಮನ್ನಣೆ ಎಲ್ಲವನ್ನು ಅಲ್ಲಗಳೆದು ಹೋಗಲು ಸಿದ್ದನಾಗಿದ್ದನು. ಅಷ್ಟೇಕೆ ಅವಳ ಮೋಹಪಾಶದಲ್ಲಿ ರಾವಣ ತನ್ನ ವ್ಯಕ್ತಿತ್ವವನ್ನು ಬಲಿಕೊಡಲು ಸಿದ್ಧವಾಗಿದ್ದನು. ಇಲ್ಲ ಇಂತಹ ವರ್ತನೆ ನನ್ನಿಂದ ಸಾಧ್ಯವಿಲ್ಲ. ಒಂದು ಹೆಣ್ಣಿಗಾಗಿ ಅವಳ ಪ್ರೀತಿ ಮೋಹಗಳಿಗಾಗಿ ತನ್ನ ಗೌರವ ಹಿರಿಮೆಗಳನ್ನು ಮರೆಯುವಂತಿಲ್ಲ" ಎನ್ನುವ ರಾಮನ ಮಾತಿನಲ್ಲಿ ರಾವಣನಿಗೆ ಸೀತೆಯ ಮೇಲಿದ್ದ ನಿರ್ಮಲ ಪ್ರೀತಿ ಎಂತಹದೆಂದು ಸ್ಪಷ್ಟವಾಗುತ್ತದೆ. ಆದರೆ ಸ್ವತಃ ಗಂಡನಾಗಿ ರಾಮನಿಗೆ ತನ್ನ ವಂಶ ಪ್ರತಿಷ್ಠೆ ಮುಖ್ಯವಾಗುತ್ತದೆಯೇ ಹೊರತು ಅವಳ ಪ್ರೀತಿಯಲ್ಲ. ರಾಮ ತನ್ನಲ್ಲೇ ತಾನು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾನಾದರೂ, ಲೋಕನಿಂದೆಗೆ ಹೆದರುತ್ತಿದ್ದಾನೆ.

“ಯಾವ ಕಾಡು ಮೃಗವೂ ಯಾವ ರಾಕ್ಷಸರೂ ನಿಮ್ಮ ಅಣ್ಣನಿಗಿಂತ ಅನಾಗರೀಕವಾಗಿರಲು ಸಾಧ್ಯವಿಲ್ಲ. ನಾನು ಹೀಗೆಂದನೆಂದು ನಿಮ್ಮ ಅಣ್ಣನಿಗೆ ಹೇಳು ಲಂಕೆಯಲ್ಲಿ ದೀರ್ಘಕಾಲ ಇದ್ದೆ, ನನ್ನನ್ನು ಹೊತ್ತುಕೊಂಡು ಹೋದ ರಾವಣೇಶ್ವರನ ಸಂಸ್ಕೃತಿ ಜಗತ್ತಿನಲ್ಲಿ ಬೇರೆ ಯಾವ ಸಂಸ್ಕೃತಿಗೂ ಕಡಿಮೆ ಆದುದಲ್ಲ. ಅಸಂಸ್ಕೃತನೊಬ್ಬ ಸಾಮವೇದ ರಚಿಸಲು ಸಾಧ್ಯವಿಲ್ಲ”[೯] ಸೀತೆಯನ್ನು ರಾಮ ಕಾಡಿಗೆ ಬಿಟ್ಟು ಬಾ ಎಂದು ಕಳುಹಿಸಿದಾಗ ಸೀತೆ ಮೇಲಿನಂತೆ ಲಕ್ಷ್ಮಣನಿಗೆ ಹೇಳುತ್ತಾಳೆ. ಇಲ್ಲಿ ಸೀತೆಗೆ ರಾವಣನ ಬಗ್ಗೆ ಇರುವ ಗೌರವ ತಿಳಿಯುತ್ತದೆ. ಆತ ಬಲವಂತವಾಗಿ ಸೀತೆಯನ್ನು ವಶಪಡಿಸಿಕೊಳ್ಳದೆ, ಅವಳಾಗಿ ಒಲಿದು ಬರಬೇಕೆಂದು ಕಾಯುತ್ತಿದ್ದ. ಆದರೆ ರಾಮ ಅಬಲೆಯಾದ ತುಂಬು ಗರ್ಭಿಣಿಯಾದ ಸೀತೆಯನ್ನು ಕಾಡಿಗಟ್ಟಿದ. ಇವರಿಬ್ಬರಲ್ಲಿ ರಾವಣನೇ ಶ್ರೇಷ್ಠನೆಂಬುದು ಸೀತೆಯ ಮೂಲಕ ಲೇಖಕಿ ಅಭಿವ್ಯಕ್ತಿಸುವ ಚಿಂತನೆ, ಪುರುಷಾಧಿಕ್ಯವನ್ನು ಧಿಕ್ಕರಿಸುವುದೇ ಆಗಿದೆ.

ರಾಮನ ಬದುಕನ್ನವಲಂಬಿಸಿದ ಸೀತೆಯ ಸಂಕಷ್ಟಗಳನ್ನು ಲೇಖಕಿ ದಾಖಲಿಸುವ ಮೂಲಕ ಅಂದಿನ ಸಮಾಜದಲ್ಲಿ ಸ್ತ್ರೀ ಅನುಭವಿಸುವ ಬಂಧನಗಳನ್ನು ವಿವರಿಸುತ್ತಾರೆ. ಈ ಬಂಧನಗಳು ನಾಗರೀಕ ಸಮಾಜದ ಭಾಗವಾಗಿದ್ದರೂ, ಅವು ರಾಕ್ಷಸೀಯ ಗುಣ ಹೊಂದಿವೆ ಎಂದು ಸಾಂಕೇತಿಕವಾಗಿ ಹೇಳಬಹುದು. ಹೆಣ್ಣು ತನ್ನ ಮನಸ್ಸಿನಂತೆ, ತನ್ನ ಇಚ್ಛೆಯಂತೆ ಹೊರಬರುವ ಹಾದಿ ಕಂಡುಕೊಳ್ಳುವುದೇ ವಿಮುಕ್ತಿ. ಇದು ರಾಕ್ಷಸೀ ಗುಣಗಳನ್ನು ಹೊಂದಿದ ಸಮಾಜದಿಂದ ನಾಗರೀಕ ಮಾನವೀಯ ಸಮಾಜದೆಡೆಗೆ ನಡೆಯುವ ಪಯಣ ಮಹಿಳೆಯ ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿತಾದ ಆಳವಾದ ಚಿಂತನೆಯನ್ನು ಇದು ಒಳಗೊಂಡಿದೆ. ಸ್ತ್ರೀ ಸಂವೇದನೆ ಪುರುಷ ಪ್ರಧಾನ ಸಮಾಜದ ಬಂಧನಗಳು ಮತ್ತು ಹೆಣ್ಣು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಹಾದಿಯನ್ನು ಈ ಕಾದಂಬರಿ ಚಿತ್ರಿಸುತ್ತದೆ. ಈ ಕಾದಂಬರಿಯಲ್ಲಿ ರಾಕ್ಷಸ ಮತ್ತು ನಾಗರೀಕ ಸಂಸ್ಕೃತಿಯ ಮುಖಾಮುಖಿಯನ್ನು ನೇರವಾಗಿ ಸ್ಪಷ್ಟವಾಗಿ

ವಿವರಿಸಲಾಗಿದೆ. ಸೀತೆ ರಾಮಾಯಣದ ಕಥೆಯಲ್ಲೇ ಜಾಗೃತ ಸ್ತ್ರೀ ಪಾತ್ರವಾಗಿ ಮೂಡಿ ಬರುತ್ತಾಳೆ. ಆಕೆ ಪುರುಷಪ್ರಧಾನ ವ್ಯವಸ್ಥೆಯೊಂದಿಗಿನ ಭಾವನಾತ್ಮಕ ಸಂಬಂಧಗಳನ್ನು ಮೀರಲು ಪ್ರಯತ್ನಿಸುತ್ತಾಳೆ. ಇದು ಹೊಸ ನಾಗರೀಕ ಆಲೋಚನೆಗಳೆಡೆಗೆ ಹೆಜ್ಜೆ ಇಡುವ ಒಂದು ಪ್ರಯತ್ನವಾಗಿದೆ.

ಈ ಕಾದಂಬರಿ ಪುರುಷ ಕೇಂದ್ರಿತ ವ್ಯವಸ್ಥೆಯ ಕಟ್ಟುಪಾಡುಗಳಿಂದ ಮಹಿಳೆ ಹೇಗೆ ವಿಮೋಚನೆ ಪಡೆಯಬಹುದು ಎಂಬುದನ್ನು ತೋರಿಸುತ್ತದೆ. ಮೇಲೆ ವಿಶ್ಲೇಷಣೆ ಮಾಡಲಾದ ನಾಗರೀಕ ಸಂಸ್ಕೃತಿ, ವಾನರ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿಗಳ ಸಂಘರ್ಷ ಮತ್ತು ಸಹಬಾಳ್ವೆಯನ್ನು ಈ ಕಾದಂಬರಿ ಚಿತ್ರಿಸುತ್ತದೆ. ಅಂತಿಮವಾಗಿ ನ್ಯಾಯ ಧರ್ಮ ಮತ್ತು ಮೌಲ್ಯಗಳನ್ನು ಎತ್ತಿ ಹಿಡಿಯುವ ನಾಗರೀಕ ಸಂಸ್ಕೃತಿಯು ಅಧರ್ಮ ಮತ್ತು ಅಹಂಕಾರದಿಂದ ಕೂಡಿದ ರಾಕ್ಷಸ ಸಂಸ್ಕೃತಿಯ ಮೇಲೆ ವಿಜಯ ಸಾಧಿಸುತ್ತದೆ. ವಾನರ ಸಂಸ್ಕೃತಿಯ ಸಹಜತೆ ಶೌರ್ಯ ಮತ್ತು ನಿಷ್ಠೆ ಈ ವಿಜಯಕ್ಕೆ ಪ್ರಮುಖ ಕಾರಣವಾಗುತ್ತದೆ. ಇಂದಿಗೂ ಸಮಾಜಕ್ಕೆ ಆದರ್ಶ ಪ್ರಾಯವಾದ ಮೌಲ್ಯಗಳು ಮತ್ತು ಜೀವನ ಪಾಠಗಳನ್ನು ನೀಡುತ್ತದೆ. ಒಟ್ಟು ಈ ಲೇಖನದಲ್ಲಿ ತೆಗೆದುಕೊಳ್ಳಬಹುದಾದ ಆಶಯವೆಂದರೆ, ಮಹಿಳೆ ಮತ್ತು ಪುರುಷರ ಹಕ್ಕುಗಳು ತಾರತಮ್ಯದಿಂದ ಕೂಡಿರಬಾರದೆಂಬುದೇ ಆಗಿದೆ. ಸೀತೆ ರಾಮ ರಾವಣ ಕಾದಂಬರಿಯ ಮೂಲಕ ಎಚ್.ವಿ.ಸಾವಿತ್ರಮ್ಮನವರು ಆಧುನಿಕ ಸಮಾಜಕ್ಕೆ ನೀಡುತ್ತಿರುವ ಸಂದೇಶವೆಂದರೆ ಪುರುಷನಷ್ಟೇ ಮಹಿಳೆಗೂ ಆಯ್ಕೆಗಳಿವೆ, ಬದುಕುವ ಹಕ್ಕಿದೆ. ತಮ್ಮ ಸಂತೋಷಕ್ಕೆ ಬೇಕಾದ ದಾರಿಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರು ಪ್ರಗತಿ ಪರವಾಗಿ ಚಿಂತಿಸಿದರೆ ತಪ್ಪಿಲ್ಲವೆಂಬ ಖಚಿತ ಅಭಿಪ್ರಾಯವೂ ಇದೆ.

**ಕೊನೆ ಟಿಪ್ಪಣಿ**

೧. ಶಿವರುದ್ರಪ್ಪ ಜಿ.ಎಸ್ (ಸಂ), ಮಹಿಳೆ ಮತ್ತು ಕನ್ನಡ ಸಾಹಿತ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೯. ಪು.೪೨

೨. ಲಕ್ಕಪ್ಪ ಗೌಡ ಎಚ್.ಜೆ. ಶ್ರೀ ರಾಮಾಯಣ ದರ್ಶನಂ ವಿಮರ್ಶಾತ್ಮಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ ೧೯೯೨. ಪು.೧೨೭

೩. ಸಾವಿತ್ರಮ್ಮ ಎಚ್.ವಿ. ವಿಮುಕ್ತಿ ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೦. ಪು.೨

೪. ಪೂರ್ವೋಕ್ತ ಪು.೩

೫. ಪೂರ್ವೋಕ್ತ ಪು.೬

೬. ಪೂರ್ವೋಕ್ತ ಪು.೭

೭. ಪೂರ್ವೋಕ್ತ ಪು.೯

೮. ಪೂರ್ವೋಕ್ತ ಪು.೨೫

೯. ಪೂರ್ವೋಕ್ತ ಪು.೫೨

**ಗ್ರಂಥ ಋಣ**


೧. ತಪಸ್ವೀಕುಮಾರ್.ನಂ ಸಂಸ್ಕೃತಿ ವಿಕಾಸ ಚೇತನ ಬುಕ್‌ಹೌಸ್, ೨೦೦೦.

೨. ಶಿವರುದ್ರಪ್ಪ.ಜಿ.ಎಸ್(ಸಂ),ಮಹಿಳೆ ಮತ್ತು ಕನ್ನಡ ಸಾಹಿತ್ಯ,ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯.

೩. ಸಾವಿತ್ರಮ್ಮ ಎಚ್.ವಿ. ಸೀತೆ ರಾಮ ರಾವಣ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೦.

೪. ಸಾವಿತ್ರಮ್ಮ ಎಚ್.ವಿ. ವಿಮುಕ್ತಿ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೦.

೫. ಲಕ್ಕಪ್ಪ ಗೌಡ ಎಚ್.ಜೆ. ಶ್ರೀ ರಾಮಾಯಣ ದರ್ಶನಂ ವಿಮರ್ಶಾತ್ಮಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ ೧೯೯೨.